◆ **ಸತ್ರಿಯಾ ನೃತ್ಯದ ಮಡಿಲಲ್ಲಿಯೇ ನಿಮ್ಮ ಬಾಲ್ಯ ಕಳೆದಿರುವಿರಿ. ಆ ದಿನಗಳು ನೆನಪಿವೆಯೇ?**

ಆ ನಿಟ್ಟಿನಲ್ಲಿ ನಾನು ಬಹಳ ಅದೃಷ್ಟವಂತನೇ ಹೌದು. ನಮ್ಮಲ್ಲಿ ಸತ್ರಗಳಲ್ಲಿ ಸತ್ರಿಯಾ ನೃತ್ಯವನ್ನು ಒಂದು ಧಾರ್ಮಿಕ ಆಚರಣೆಯಾಗಿ ಪ್ರಸ್ತುತಪಡಿಸಲಾಗುತ್ತದೆ. ನಾನು ಮಾಜುಲಿ ಎಂಬ ದ್ವೀಪದಲ್ಲಿ ಹುಟ್ಟಿದ್ದು. ಅಮ್ಮ ರೇಬತಿ ಬೋರಾ, ಅಪ್ಪ ಬೋಲೋರಾಮ್ ಬೋರಾ. ನಾಲ್ಕನೇ ವರ್ಷದಲ್ಲಿಯೇ ನನ್ನನ್ನು ಅಲ್ಲಿನ ಕಮಲಬಾರಿ ಸತ್ರಕ್ಕೆ ಕರೆತಂದು ಒಪ್ಪಿಸಿದ್ದರು. ಒಂದೆರಡು ವರ್ಷದಲ್ಲಿಯೇ ನನಗೆ ಸತ್ರಿಯಾ ನೃತ್ಯ ಮತ್ತು ಸಂಗೀತದ ತರಬೇತಿ ಆರಂಭಿಸಿದರು. ಆ ಕಾಲದಲ್ಲಿ, ಅಂದರೆ 1956ರ ಸಂದರ್ಭದಲ್ಲಿ ವೈಷ್ಣವ ಪಂಥದ ಪ್ರಸಿದ್ಧ ಕಲಾವಿದರಾದ ಮಣಿರಾಮ್ ದತ್ತ ಮುಕ್ತಿಯಾರ್ ಬಾರ್ಬಾಯನ್ ಅವರೇ ನನಗೆ ಆರಂಭಿಕ ಪಾಠಗಳನ್ನು ಮಾಡಿದರು. ಆಗಿನ ಮತ್ತೊರ್ವ ಪ್ರಸಿದ್ಧ ಕಲಾವಿದ, ಗುರು ರಾಸೇಶ್ವರ್ ಸೈಕಿಯಾ ಬಾರ್ಬಾಯನ್ ಅವರು ನಾಟ್ಯ, ಬಾಯನ್ (ವಾದನ) ಮತ್ತು ಓಜಾಪಲಿಯ (ನೃತ್ಯದ) ಪಾಠಗಳನ್ನು ಹೇಳಿಕೊಡಲಾರಂಭಿಸಿದರು. ನಾನು ಬಾಲ್ಯದಲ್ಲಿ ಸತ್ರದ ಧಾರ್ಮಿಕ ಆಚರಣೆಗಳನ್ನು ಕಲಿಯುತ್ತ, ಈ ಕಲೆಯನ್ನು ಅಭ್ಯಸಿಸಬೇಕಾಗಿತ್ತು. ಅಸ್ಸಾಮ್‌ನ ಪ್ರಸಿದ್ಧ ಹಾಗೂ ಬಹುಶ್ರುತ ವಿದ್ವಾಂಸರಾದ ಮಹಾಪುರುಷ ಶ್ರೀಮಂತ ಶಂಕರ ದೇವ (1449-1568) ಅವರು ರಚಿಸಿರುವ 'ಗುಣಮಾಲಾ' ಕೃತಿಯನ್ನು (ಅಂದಿನ ಕೋಚರಾಜ ನರನಾರಾಯಣ ಅವರ ಕೋರಿಕೆಯ ಮೇರೆಗೆ ಇಡೀ ಭಾಗವತವನ್ನು ಸಂಕ್ಷಿಪ್ತಗೊಳಿಸಿ ಬರೆದ ರಚನೆಗಳನ್ನು) ಪೂರ್ತಿಯಾಗಿ ಬಾಯಿಪಾಠ ಕಲಿಯಬೇಕಾಗಿತ್ತು. ಅದೊಂಥರ ಸತ್ರಿಯಾ ನೃತ್ಯದ ತಳಪಾಯವಿದ್ದಂತೆ. ಹೀಗೆ ಒಂದು ಮಗು ಕಲಿಯುತ್ತ ದೊಡ್ಡವನಾಗುತ್ತಿದ್ದಂತೆ, ತಾಳ ಕೌಶಲ ಚೆನ್ನಾಗಿದ್ದರೆ ಬಾಯನ (ವಾದನ) ಆಚಾರ್ಯನನ್ನಾಗಿಯೂ, ಧ್ವನಿ ಚೆನ್ನಾಗಿದ್ದರೆ ಗಾಯನಾಚಾರ್ಯನನ್ನಾಗಿಯೂ ರೂಪಿಸುತ್ತಿದ್ದರು. ಕೌಶಲ ಯಾವುದೇ ಇರಲಿ, ನೃತ್ಯವನ್ನು ಕಲಿಯುವುದು ಕಡ್ಡಾಯವಾಗಿತ್ತು. ಒಟ್ಟಿನಲ್ಲಿ ನನಗೆ ಚಿಕ್ಕವಯಸ್ಸಿನಲ್ಲಿಯೇ ತರಬೇತಿ ಆರಂಭವಾದ್ದರಿಂದ ನನ್ನ ಕಲಿಕೆಯು ಕ್ಷಿಪ್ರವಾಗಿ ಸಾಗಿ, ಚಿಕ್ಕವಯಸ್ಸಿನಲ್ಲಿಯೇ ಬಾರ್ಬಾಯನ್ (ಪ್ರಧಾನ ಕಲಾವಿದ) ಎಂಬ ಗೌರವಕ್ಕೆ ಪಾತ್ರನಾದೆ. ಸತ್ರಿಯಾ ನೃತ್ಯ ಪ್ರಕಾರವು ವೈಭವದಲ್ಲಿದ್ದ ಕಾಲದಲ್ಲಿ ನಾನು ಅದನ್ನು ಕಲಿಯಲು ಶುರು ಮಾಡಿದ್ದೆ. ಮಹಾತ್ಮರಾದ ಗುರುಗಳಿಂದ ಪಾಠ ಹೇಳಿಸಿಕೊಳ್ಳುವ ಅವಕಾಶ ನನಗೆ ಸಿಕ್ಕಿದೆ.

◆ **ನೀವು ಸತ್ರಿಯಾ ನೃತ್ಯಕ್ಕಾಗಿ ನಿಮ್ಮ ಬದುಕನ್ನೇ ಸಮರ್ಪಿಸಿಕೊಂಡಿದ್ದೀರಿ. ಕಲೆಯ ಬಹು ಸುದೀರ್ಘವಾದ ಮತ್ತು ವಿಭಿನ್ನವಾದ ಹಾದಿಯಲ್ಲಿ ಅನೇಕ ಸವಾಲುಗಳನ್ನು ಎದುರಿಸಿರಬಹುದು?**

ಬಾಲ್ಯದಲ್ಲಿಯೇ ಸತ್ರ ಸೇರಿ, ಅಲ್ಲಿಯೇ ಬೆಳೆದು ಬರುವ ಅವಕಾಶ ನನಗೆ ದೊರೆತಿದೆ. ಸತ್ರದಲ್ಲಿದ್ದಾಗ ಕಲಿತ ವಿಚಾರಗಳನ್ನು ಆಧರಿಸಿ, ಸತ್ರಿಯಾ ಕಲೆ ಮತ್ತು ಸಂಸ್ಕೃತಿಯ ಜೊತೆಗೆ ಜೀವನ ಸಾಗಿಸುವುದು ಸಾಧ್ಯವಾಗಿರುವ ಬಗ್ಗೆಯೇ ನನಗೆ ಹೆಮ್ಮೆಯಿದೆ. ಈ ಕಲಾಪ್ರಕಾರದ ದೆಸೆಯಿಂದ ನಾನು ದೇಶದ ಎಷ್ಟೊಂದು ಜನರನ್ನು ಭೇಟಿಯಾಗುವುದು ಸಾಧ್ಯವಾಯಿತು! ಕಾರ್ಯಕ್ಷೇತ್ರವು ನನ್ನನ್ನು ಸದಾ ಚಟುವಟಿಕೆಯಲ್ಲಿ ಇರುವಂತೆ ಮಾಡುವ, ಹೆಮ್ಮೆ ಮತ್ತು ಸಂತೋಷವನ್ನು ಕೊಡುವಂತಹುದು. ಸತ್ರಿಯಾ ಕಲೆಯು ನನಗೆ ಆನಂದವನ್ನು ಕೊಟ್ಟಿದೆ ಎಂದರೆ ಸರಿ. ನೃತ್ಯದ ಮೂಲಕ ಭಕ್ತಿಮಾರ್ಗವನ್ನು ಅರಿತುಕೊಳ್ಳುವುದಕ್ಕೆ ಅವಕಾಶ ದೊರೆತಿದೆ. ನನ್ನ ಗಮನವು ಹತ್ತು ದಿಕ್ಕುಗಳಿಗೆ ಹರಿದು ಹೋಗದಂತೆ, ಇದೇ ಕಲಾಪ್ರಕಾರದಲ್ಲಿ ನೆಡುವಂತೆ ಮಾಡಿದ್ದಲ್ಲದೆ ಅದು ಅಂತರಂಗದಲ್ಲಿರುವ ಬೆಳಕನ್ನು ಕಂಡುಕೊಳ್ಳುವುದಕ್ಕೆ ನೆರವಾಗಿದೆ.

ನೃತ್ಯ ಮತ್ತು ಸಂಗೀತವು ನನ್ನ ಆತ್ಮದ ಸಂಗಾತಿಗಳು. ಅವು ಬಾಲ್ಯದಲ್ಲಿ ನನ್ನನ್ನು ಅಮ್ಮನಂತೆ ಪೊರೆದವು. ನಂತರದ ದಿನಗಳಲ್ಲಿಯೂ ಅವು ತುತ್ತು ನೀಡಿ ಪೊರೆದವು. ಸತ್ರದಲ್ಲಿ ವಾಸವಿದ್ದಾಗ ನನಗೆ ಅಲ್ಲಿನ ದೈನಂದಿನ ಧಾರ್ಮಿಕ ಆಚರಣೆಗಳನ್ನು ನಿರ್ವಹಿಸುವ ಜವಾಬ್ದಾರಿ ಇರುತ್ತಿತ್ತು. ಹಬ್ಬ ಹರಿದಿನ, ಉತ್ಸವ ಜಾತ್ರೆಗಳಿದ್ದಾಗ ಅವುಗಳನ್ನೂ ನಿರ್ವಹಿಸುವ ಹೊಣೆಗಾರಿಕೆಯಿತ್ತು. ಈ ಜವಾಬ್ದಾರಿಯು ನಾನು ಬೇಗನೇ ಪ್ರೌಢನಾಗುವಂತೆ ಮಾಡಿತು. ನೃತ್ಯದ ಕುರಿತು ನನಗೆ ದೊರೆಯುತ್ತಿದ್ದ ಪಾಠಗಳನ್ನು ಪ್ರಾಯೋಗಿಕವಾಗಿ ಅನ್ವಯ ಮಾಡಿಕೊಂಡು ಪರಿಶೀಲಿಸಲು ಅಲ್ಲಿ ಅವಕಾಶವೂ ದೊರೆಯುತ್ತಿತ್ತು. ಈ ವಿಚಾರದಲ್ಲಿ